ದಿನಾಂಕಃ 30.10.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: 1 ಮತ್ತು 2 ನೇ ಪ್ರತಿವಾದಿ ಪರ ಶ್ರೀ ಎನ್.ಎಸ್.ಜೆ. ವಕೀಲರಿಂದ:**

ದಾವ ಸ.ನಂ. ಮೂಲತಃ ಸರ್ಕಾರಿ ಸ.ನಂ. ಎಂದರೆ ಸರಿ. ದಾವ ಸ.ನಂ. ಮೂಲತಃ 5 ಎಕರೆ 38 ಗುಂಟೆ ವಿಸ್ತೀರ್ಣ ಜಮೀನಾಗಿರುತ್ತದೆ. ದಾವ ಸ.ನಂ. ಪ್ರಸ್ತುತವಾಗಿ ಎರಡು ಪೋಡಾಗಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಮೂರು ಎಕರೆ ವಿಸ್ತೀರ್ಣದ ಜಮೀನಿಗೆ ಸಂಬಂಧಿಸಿದಂತೆ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ದಾವ ಸ.ನಂ. ಉಳಿಕೆ ಜಮೀನು ನನ್ನ ಹೆಸರಿನಲ್ಲಿಯೇ ಇರುತ್ತದೆ. ದಾವ ಸ.ನಂ. ನ ಉಳಿಕೆ ಜಮೀನಾದ 2 ಎಕರೆ 38 ಗುಂಟೆಯು ದಾವಾ ಜಮೀನಿನ ಯಾವ ದಿಕ್ಕಿಗೆ ಇರುತ್ತದೆ ಎಂಬುದರ ಮಾಹಿತಿ ನನಗಿರುವುದಿಲ್ಲ. 5 ಎಕರೆ 38 ಗುಂಟೆಯ ಜಮೀನು ಒಂದೇ ಸ.ನಂ. ಗೆ ಸೇರಿದ್ದಾಗಿರುತ್ತದೆ. ದಾವ ಜಮೀನು ಮತ್ತು ಉಳಿಕೆ ಜಮೀನಾದ 2 ಎಕರೆ 38 ಗುಂಟೆಯು ಒಂದೇ ಕಡೆಯಲ್ಲಿ ಇರುತ್ತದೆ. ದಾವ ಪತ್ರದಲ್ಲಿ ಕೇವಲ 3 ಎಕರೆ ಜಮೀನಿಗೆ ಸಂಬಂಧಿಸಿದಂತೆ ಚೆಕ್ಕುಬಂದಿಯನ್ನು ತೋರಿಸಲಾಗಿರುತ್ತದೆ. ನಾನು ಹೇಳಿದಂತೆ ಸ.ನಂ.248 ರಲ್ಲಿ ಒಟ್ಟು 5 ಎಕರೆ 38 ಗುಂಟೆ ಇದ್ದ ಪಕ್ಷದಲ್ಲಿ ದಾವಾ ಸ್ವತ್ತಾದ 3 ಎಕರೆ ಜಮೀನಿನ ಚೆಕ್ಕುಬಂದಿಯ ಯಾವುದಾದರೂ ಒಂದು ದಿಕ್ಕಿನಲ್ಲಿ ಉಳಿಕೆಯ ಜಮೀನಾದ 2 ಎಕರೆ 38 ಗುಂಟೆಯ ಜಮೀನನ್ನು ತೋರಿಸಬೇಕು ಎಂದರೆ ಸಾಕ್ಷಿಯು ಸದರಿ ಜಮೀನು ಮೊದಲು ನನ್ನ ತಾಯಿಯ ಹೆಸರಿಗೆ ಇತ್ತು ಪೋಡಿಯಾದ ನಂತರದಲ್ಲಿ ಸದರಿ ಜಮೀನು ನನ್ನ ಹೆಸರಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ.

ನನ್ನ ತಾಯಿಯ ಹೆಸರಲ್ಲಿ ಒಟ್ಟು 2 ಎಕರೆ 28 ಗುಂಟೆ ಸ.ನಂ.248 ರಲ್ಲಿ ಈ ಹಿಂದೆ ಇತ್ತು. ನನ್ನ ತಾಯಿಯು 2014 ನೇ ಸಾಲಿನಲ್ಲಿ ಮೃತ ಪಟ್ಟಿರುತ್ತಾರೆ. ನಿಪಿ-2 ರ ಪ್ರಕಾರ 3 ಎಕರೆಯ ಜಮೀನು ಮತ್ತು 2 ಎಕರೆ 38 ಗುಂಟೆ ಜಮೀನು ನನ್ನ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ತಾಯಿಯ ನಿಧನದ ನಂತರ ಸದರಿ 2 ಎಕರೆ 38 ರ ಜಮೀನು ನನ್ನ ಹೆಸರಿಗೆ ಖಾತೆಯಾಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ.ನಂ. ನಲ್ಲಿ 30 ಗುಂಟೆ ವಿಸ್ತೀರ್ಣದ ಸ್ವತ್ತು ಮಂಗಳೂರು-ಬೆಂಗಳೂರು ಪೈಪ್ ಲೈನ್ ಯೋಜನೆಗೆ ಮೀಸಲಿಡಲಾಗಿರುತ್ತದ ಎಂದರೆ ಸಾಕ್ಷಿಯು ಭೋಗ್ಯದ ಪತ್ರದ ಮುಖಾಂತರ ಅದನ್ನು ಮೀಸಲಿಡಲಾಗಿರುತ್ತದೆ ಮತ್ತು ಸದರಿ ಹಕ್ಕನ್ನು ಭೂಮಿಯ ಒಳಗೆ ಮಾತ್ರ ನೀಡಲಾಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಜಮೀನಿನ ಪಶ್ಚಿಮದಿಂದ ಪೂರ್ವ ದಿಕ್ಕಿಗೆ ಸದರಿ ಪೈಪ್ ಲೈನ್ ನ ಜಮೀನು ಇರುತ್ತದೆ. ನಿಪಿ-51 ರಲ್ಲಿ 15(ಎ) ಎಂದು ಗುರುತಿಸಲಾಗಿರುವ ಜಾಗವು ಒಟ್ಟು 5 ಎಕರೆ 38 ಗುಂಟೆ ಜಮೀನಿಗೆ ಸಂಬಂಧಿಸಿದ ನಕಾಶೆಯಾಗಿರುತ್ತದೆ ಎಂದರೆ ಸರಿ. ಸದರಿ ನಕಾಶೆಯ ಪ್ರಕಾರ ದಾವಾ ಸ.ನಂ. ನ ಒಟ್ಟು 5 ಎಕರೆ 38 ಗುಂಟೆ ಜಮೀನಿನ ದಕ್ಷಿಣ ದಿಕ್ಕಿಗೆ ಸ.ನಂ.247 ರ ಜಮೀನು ಇರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ನಾನು 9 ನೇ ತರಗತಿಯ ವರೆಗೂ ವಿಧ್ಯಾಭ್ಯಾಸ ಮಾಡಿರುತ್ತೇನೆ. ನಾನು ನನ್ನ ದಾವಾ

ಪತ್ರದಲ್ಲಿ ಸ.ನಂ.247 ನ್ನು ಕಾಣಿಸದೇ ಇದ್ದ ಕಾರಣ ಸದರಿ ಸ.ನಂ. ನ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ದಾವಾ ಪತ್ರದಲ್ಲಿ ದಾವಾ ಸ್ವತ್ತಿನ ದಕ್ಷಿಣ ದಿಕ್ಕಿಗೆ ಸ.ನಂ.266 ಎಂದು ತೋರಿಸಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ವಿಭಾಗ ಪತ್ರದಲ್ಲಿ ನಮೂದಿಸಿರುವಂತೆ ಚೆಕ್ಕುಬಂದಿಯನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-51 ರ ಪ್ರಕಾರ ಸ.ನಂ.248 ಮತ್ತು 266 ರ ಜಮೀನಿನ ಮದ್ಯದಲ್ಲಿ 247 ರ ಜಮೀನು ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸ.ನಂ.247 ರ ಜಮೀನು ನನಗೆ ಸೇರಿರುವುದಿಲ್ಲ ಎಂದು ನುಡಿಯುತ್ತಾರೆ. ಸ.ನಂ.247 ರ ಜಮೀನು ಮುಸ್ಲೀಂ ಜನಾಂಗದ ಒಬ್ಬರಿಗೆ ಸೇರಿದ್ದಾಗಿರುತ್ತದೆ. ನಾನು ಸದರಿ ಜಮೀನಿನ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿ. ದಾವಾ ಜಮೀನು ಸ.ನಂ.247 ರ ಜಮೀನಿಗೆ ಲಗತ್ತಾಗಿರುವ ಸ್ವತ್ತಾಗಿರುತ್ತದೋ ಅಥವಾ ರಸ್ತೆಗೆ ಲಗತ್ತಾಗಿರುವ ಸ್ವತ್ತಾಗಿರುತ್ತದೋ ಎಂಬ ಪ್ರಶ್ನೆಗೆ ಸಾಕ್ಷಿಯು ಸ.ನಂ.248 ರಲ್ಲಿ ಒಟ್ಟು 5 ಎಕರೆ 38 ಗುಂಟೆ ವಿಸ್ತೀರ್ಣದ ಜಮೀನಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಹಂತೂರು ಗ್ರಾಮ ಪಂಚ್ಾಯಿಯ ವ್ಯಾಪ್ತಿಗೆ ಸೇರಿದ್ದಾಗಿರುತ್ತದೆ.

ದಾವಾ ಸ್ವತ್ತಿನ ಉತ್ತರ ದಿಕ್ಕಿನ ರಸ್ತೆಗೆ ಗ್ರಾಮ ಪಂಚಾಯ್ತಿಯವರು ರಸ್ತೆಗಾಗಿ ಯಾವುದೇ ಅನುದಾನವನ್ನು ಮೀಸಲಿಡಬಾರದು ಎಂದು ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ದಾವಾ ಸ್ವತ್ತಿನ ಉತ್ತರ ದಿಕ್ಕಿಗೆ ರಸ್ತೆಯನ್ನು ಗುರುತಿಸಿದ್ದಲ್ಲಿ ನನಗೆ ತೊಂದರೆಯಾಗುತ್ತದೆ ಎಂದು ಜಿಲ್ಲಾ ಪಂಚಾಯ್ತಿಯ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳಿಗೆ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪಂಚಾಯ್ತಿಯವರು ಸ.ನಂ.248 ರ ಜಮೀನನ್ನು ಸೇರಿಸಿ ರಸ್ತೆಯನ್ನು ನಿರ್ಮಿಸಲು ನಿರ್ಣಯಿಸಿದ ಕಾರಣ ಸದರಿ ಅರ್ಜಿಯನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-68 ಪಂಚಾಯ್ತಿಯವರು ದಾವಾ ಜಮೀನಿನ ಉತ್ತರ ದಿಕ್ಕಿಗೆ ಸ.ನಂ.248 ರ ಜಮೀನನ್ನು ಸೇರಿಸಿ ರಸ್ತೆಯನ್ನು ಮಾಡಲು ನಿರ್ಣಯಿಸಿದ ದಾಖಲಾತಿಯಾಗಿರುತ್ತದೆ ಎಂದರೆ ಸರಿ. ಸದರಿ ರಸ್ತೆಯು ಇತರೆ ಗ್ರಾಮಸ್ಥರಿಗೂ ಉಪಯೋಗಿಯಾದ ಕಾರಣ ಅದನ್ನು ಅಭಿವೃದ್ಧಿ ಪಡಿಸಬೇಕು ಎಂದು ಅದನ್ನು ಪಂಚಾಯ್ತಿಯವರು ನಿರ್ಣಯ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸದರಿ ನಿರ್ಣಯಕ್ಕೆ ಪಂಚಾಯ್ತಿಯವರು ಯಾವುದೇ ದಾಖಲಾತಿಯನ್ನು ನೀಡದೇ ಹಿಂದಿನ ದಿನಾಂಕ ಅರ್ಜಿಯನ್ನೇ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-62 ರಲ್ಲಿ ಕಂಡುಬರುವ ಗೇಟ್ ಪ್ರತಿವಾದಿಯವರ ಮನೆಗೆ ಸಂಬಂಧಿಸಿದ್ದಾಗಿರುತ್ತದೆ.

ನಿಪಿ-63 ರಲ್ಲಿ ಕಂಡುಬರುವ ಕೊಳವೆ ಬಾವಿ ರಸ್ತೆಯ ಒಂದು ಬದಿಯಲ್ಲಿ ಇರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಕೊಳವೆ ಬಾವಿಯನ್ನು ಸರ್ಕಾರಿ ರಸ್ತೆಯಾಗಿದ್ದಲ್ಲಿ ಮಾತ್ರ ಮಾಡಲಾಗುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಕೊಳವೆ ಬಾವಿಯನ್ನು ಸರ್ಕಾರಿ ಜಾಗದಲ್ಲಿ ಮಾಡಲಾಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಉತ್ತರ ದಿಕ್ಕಿಗಿರುವ ಗೇಟಿನ ಬಳಿ ರಸ್ತೆಯು 20 ಅಡಿಗಿಂತ ಹೆಚ್ಚಾಗಿ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅಷ್ಟು ಅಡಿ ರಸ್ತೆಯು ಇರುವುದಿಲ್ಲ ಎಂದು ನುಡಿಯುತ್ತಾರೆ. ಸ.ನಂ.246/1 ರ ಜಮೀನು ಯಾರಿಗೆ ಸೇರಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. ದಾವಾ ಜಮೀನಿನ ದಕ್ಷಿಣ ದಿಕ್ಕಿಗೆ ಸ.ನಂ.246 ರ ಜಮೀನು

ಇರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸ.ನಂ.246/1 ರ ಜಮೀನು ಅನ್ನಪೂರ್ಣಮ್ಮ ರವರಿಗೆ ಸೇರಿದ್ದಾಗಿರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ನಾನು ಅನ್ನಪೂರ್ಣಮ್ಮ ಮತ್ತು ಲಕ್ಷ್ಮಣ ಎಂಬುವವರ ವಿರುದ್ಧ ಇದೇ ನ್ಯಾಯಾಲಯದ ಮುಂದೆ ದಾವೆಯನ್ನು ದಾಖಲಿಸಿರುತ್ತೇನೆ. ಸದರಿ ದಾವೆಯಲ್ಲಿ ನ್ಯಾಯಾಲಯದಿಂದ ಆಯುಕ್ತರನ್ನು ನೇಮಕ ಮಾಡಲಾಗಿತ್ತು ಎಂದರೆ ಸರಿ. ಸದರಿ ದಾವೆಯಲ್ಲಿ ಆಯುಕ್ತರು ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ ನಂತರ ಸದರಿ ದಾವೆಗಳನ್ನು ಹಿಂಪಡೆದಿರುತ್ತೇನೆ ಎಂದರೆ ಸಾಕ್ಷಿಯು ಭೂ ದಾಖಲೆಗಳ ಜಿಲ್ಲಾ ನಿರ್ದೇಶಕರ ಕಛೇರಿಗೆ ಅರ್ಜಿಯನ್ನು ಸಲ್ಲಿಸುವ ಉದ್ದೇಶದಿಂದ ಸದರಿ ದಾವೆಗಳನ್ನು ಹಿಂಪಡೆದಿರುತ್ತೇನೆ ಎಂದು ನುಡಿಯುತ್ತಾರೆ.

ಸದರಿ ದಾವೆಯಲ್ಲಿ ಸಲ್ಲಿಸಿರುವ ವರದಿಯಲ್ಲಿ ಯಾವ ಜಮೀನು ಯಾವ ಜಮೀನಿನ ಸ್ವತ್ತಿನ ಮೇಲೆ ಅತಿವ್ಯಾಪ್ತಿಯಾಗಿತ್ತು ಎಂದು ವರದಿ ಬಂದಿರುವ ಬಗ್ಗೆ ನನಗೆ ನೆನಪಾಗುತ್ತಿಲ್ಲ. ದೇವವೃಂದದಿಂದ ಮೂಡಿಗೆರೆಗೆ ಬರುವ ರಸ್ತೆಯು ದಾವಾ ಜಮೀನಿನ ಪಶ್ಚಿಮ ದಿಕ್ಕಿಗೆ ಬರುತ್ತದೆ. ಸದರಿ ರಸ್ತೆಯು ಡಾಂಬಾರಿನ ರಸ್ತೆ ಎಂದರೆ ಸರಿ. ದಾವಾ ಸ್ವತ್ತಿನ ಉತ್ತರ ದಿಕ್ಕಿಗಿರುವ ರಸ್ತೆಯು ಪಶ್ಚಿಮದಿಂದ ಪೂರ್ವ ದಿಕ್ಕಿಗೆ ಹಾದುಹೋಗುತ್ತದೆ. ಸದರಿ ರಸ್ತೆಯು ಸರ್ಕಾರಿ ಜಾಗದಲ್ಲಿ ಇರುತ್ತದೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.